ಅಂಗನವಾಡಿ ಕೇಂದ್ರಗಳು

584; ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು,

ಆ) ಈ ಪೈಕಿ ಸ್ವಂತ ಕಟ್ಟಡ ಹೊಂದಿರುವ ಮತ್ತು ಬಾಡಿಗೆ ಕಟ್ಟಡ ಹೊಂದಿರುವ ಅಂಗನಾಡಿ ಕಟ್ಟಡಗಳ ಸಂಖ್ಯೆ ಎಷ್ಟು;

ಇ) 2013–14ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡ ದುರಸ್ಥಿ ಸಲುವಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೆ:

ಈ) ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ವಿವರ ನೀಡುವುದು?

ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 312 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ

ಆ) ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿನ ಅಂಗನವಾಡಿಗಳ ಪೈಕಿ 210 ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ಹಾಗೂ 102 ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಇ) ಬಿಡುಗಡೆ ಮಾಡಲಾಗಿದೆ

ಈ) ಹೌದು.

ರಾಜ್ಯಕ್ಕೆ ಒಟ್ಟು 2058 ಹೊಸ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ

ಇದರಲ್ಲಿ ಬೀದರ್ ಜಿಲ್ಲೆಗೆ 3 ಕೇಂದ್ರಗಳನ್ನು ಮಂಜೂರು ಮಾಡಲು ಕೋರಲಾಗಿರುತ್ತದೆ.

ಶ್ರೀ ಅಶೋಕ್ ಖೇಣಿ District incharge ನವರು ಒಂದು answer ಕೊಟ್ಟಿದ್ದಾರೆ. ಇಲ್ಲಿ ಬೇರೆ answer ಕೊಟ್ಟಿದ್ದಾರೆ ಯಾವುದು correct ಇದೆಯೆಂದು ನನಗೆ ಗೊತ್ತಿಲ್ಲ. District ನಲ್ಲಿ ಕೊಟ್ಟಿದ್ದು ಅಂಗನವಾಡಿಯದು ಬೀದರ್‌ನಲ್ಲಿ 239 ಮತ್ತು ಹುಮನಾಬಾದ್ ತಾಲ್ಲೂಕಿನಲ್ಲಿ 73 ಎಂದು ಕೊಟ್ಟಿದ್ದಾರೆ. ಆದರೆ ಈ ಸದನದಲ್ಲಿ ಬೇರೆ ಉತ್ತರ ಕೊಟ್ಟಿದ್ದಾರೆ. ಇಲ್ಲಿ 210 ಬೀದರ್, 102 ಹುಮನಾಬಾದ್ ಎಂದು ಕೊಟ್ಟಿದ್ದಾರೆ. Answer itself is wrong ನಾನು ಎರಡನೆಯ ಪ್ರಶ್ನೆ ಕೇಳಿದ್ದು, I will divert a little bit, ಇವತ್ತು ನಾನು ಬೆಳಗ್ಗೆ guest house ನಿಂದ ಬರುತ್ತಿದ್ದಾಗ, ಕೆರೆಯ ಹತ್ತಿರ ಆಕಳು ಮತ್ತು ಮರಿಯನ್ನು ನೋಡಿದೆ. ಆಕಳು ತನ್ನ ಮರಿಗೆ ಪ್ರೀತಿಯಿಂದ ನೆಕ್ಕುತ್ತಿರುವುದನ್ನು ನೋಡಿದೆ ಅಂಗನವಾಡಿಯಲ್ಲಿ ಚಿಕ್ಕಮಕ್ಕಳಿಗೆ ಈ ತರಹ ಸೌಲಭ್ಯವಿದೆ ಎನ್ನುವ ಬಗ್ಗೆ ನಾನು ಒಂದು ರಿಪೋರ್ಟ್ ಅನ್ನು ತಮಗೆ ಕೊಟ್ಟಿದ್ದೇನೆ. ಅಲ್ಲಿ ಏನೂ facilities ಇಲ್ಲ. Worst than slums...

ಅಧ್ಯಕ್ಷರು: ಪ್ರಶ್ನೆ ಕೇಳಿ

Sri ASHOK KHENY: The question is the surroundings of the Anganwadi Centres are unapproachable, what action you are taking to maintain them? The second question is according to the central Government Order No 1 /16/20/CD-1/, we state that the Anganwadi Centres should prepare the list of children 0-6 years registered under the child Development programme If not registered, the reasons for not registering the same should be given and the third is, it is also observed that these Anganwadi Centres do not display the time table as well as the food to be provided

Mr. CHAIRMAN: The Government is aware of all these things What is your question please ask

Sri. ASHOK KHENY Now my question is what action has been taken to maintain the Anganwadi Centres in a hygienic way?

ಶ್ರೀಮತಿ ಉಮಾಶ್ರೀ: ಅವರು ಅವರ ಕ್ಷೇತ್ರಕ್ಕೆ ಸೀಮಿತವಾಗಿ ಕೇಳಿದ್ದಾರೆ ಅದಕ್ಕೆ ನಾವು ಉತ್ತರ ಕೊಟ್ಟಿದ್ದೇವೆ ಸೀಮಿತವಾಗಿ ಹೇಳುವುದಾದರೆ, ಬೀದರ್ ದಕ್ಷಿಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 312 ಅಂಗನವಾಡಿಗಳ ಪೈಕಿ 239 ಬೀದರ್ ಶಿಶು ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ್ದು, 73 ಕೇಂದ್ರಗಳು ಹುಮನಾಬಾದ್ ಶಿಶು ಅಭಿವೃದ್ಧಿ ಯೋಜನೆಗೆ ಸೇರಿರುತ್ತವೆ. ಒಟ್ಟು 312 ಎಂದು ಹೇಳಿದ್ದೇವೆ. ನಾವು ಸರ್ಕಾರದಿಂದ ಸರಿಯಾದ ಮಾಹಿತಿಯನ್ನು ಅವರಿಗೆ ಕೊಟ್ಟಿದ್ದೇವೆ. ಅವರು ಸ್ವಂತ ಕಟ್ಟಡ ಹೊಂದಿರುವ ಬಗ್ಗೆ ಕೇಳಿದ್ದಾರೆ ಹಾಗೂ ಬಾಡಿಗೆ ಕಟ್ಟಡಗಳ ಬಗ್ಗೆಯೂ ಕೇಳಿದ್ದಾರೆ. ಆ ಮಾಹಿತಿಯನ್ನು ಕೂಡ ಕೊಟ್ಟಿದ್ದೇವೆ. ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ 210 ಕೇಂದ್ರಗಳು ಸ್ವಂತ ಕಟ್ಟಡದಲ್ಲಿವೆ. 161 ಬೀದರ್ ತಾಲ್ಲೂಕಿನಲ್ಲಿ 49 ಹುಮಾನಾಬಾದ್ ತಾಲ್ಲೂಕಿನಲ್ಲಿ ಸ್ವಂತ ಕಟ್ಟಡಗಳಿವೆ. 102 ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. 78 ಬೀದರ್ ತಾಲ್ಲೂಕು ಮತ್ತು 24 ಹುಮನಾಬಾದ್ ತಾಲ್ಲೂಕಿಗೆ ಎನ್ನುವ ಉತ್ತರವನ್ನು ನಾವು ಕೊಟ್ಟಿದ್ದೇವೆ. ಹಾಗೆಯೇ ಅನುದಾನ ಬಿಡುಗಡೆ ಮಾಡಿದ್ದೇವೆ ಹೊಸ ಅಂಗನವಾಡಿ ಮಂಜೂರು ಕೋರಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದೇವೆ. ಇದರಲ್ಲಿ ಬೀದರ್ ಜಿಲ್ಲೆಯ ಮೂರು ಕೇಂದ್ರಗಳನ್ನು ಮಂಜೂರು ಮಾಡಲಿಕ್ಕೆ ಕೋರಲಾಗಿರುತ್ತದೆ.

ಶ್ರೀ ಅಶೋಕ್ ಖೇಣಿ: ನಾನು ತಮಗೆ ಒಂದು report ಕೊಡುತ್ತೇನೆ. This is the status of the Anganawadis. ನಾನು question ಕೇಳಿದ್ದು whether the grant has been released for the repair of Anganawadi building ? If it is released, why they are not maintained ?

ಅಧ್ಯಕ್ಷರು: ನೀವು ಈ ಪ್ರಶ್ನೆಯನ್ನು ಕೇಳಲೇ ಇಲ್ಲ :

ಶ್ರೀಮತಿ ಉಮಾಶ್ರೀ: ದುರಸ್ತಿಗೆ ಸಂಬಂಧಪಟ್ಟ ಹಾಗೆ ಕೂಡ ಈಗಾಗಲೇ ಹಣವನ್ನು ಒದಗಿಸಿದ್ದೇವೆ ಅದರಲ್ಲಿ ಬೀದರ್ ಜಿಲ್ಲೆಗೆ 60ಲಕ್ಷ ರೂ ಅನುದಾನ ಒದಗಿಸಿದ್ದೇವೆ 25ಲಕ್ಷ ರೂಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತೇವೆ ಇದರಲ್ಲಿ 5ಲಕ್ಷ ರೂ ಹುಮನಾಬಾದ್‌ಗೆ ಇರುವ ಅನುದಾನ, ಈ ರೀತಿಯಾಗಿ ದುರಸ್ತಿಗೆ ಅನುದಾನ ವಿನಿಯೋಗಿಸಿದ್ದೇವೆ

ಅಧ್ಯಕ್ಷರು: ಬಿಡುಗಡೆ ಮಾಡಿದ ಅನುದಾನವನ್ನು ಬೇಗ ಬಳಕೆ ಮಾಡುವ ವಿಚಾರದಲ್ಲಿ ಆಸಕ್ತಿ ತೋರಿಸಿ.

ಶ್ರೀಮತಿ ಉಮಾಶ್ರೀ: ನಾವು ಈಗಾಗಲೇ ಕಳುಹಿಸಿದ್ದೇವೆ. ಮಾನ್ಯ ಸದಸ್ಯರಾದ ಖೇಣಿಯವರಲ್ಲಿ ನಾವು ವಿನಂತಿ ಮಾಡುತ್ತೇವೆ, ಅವರು English ನಲ್ಲಿ ಸಾಕಷ್ಟು ಮಾಹಿತಿಯನ್ನು ಕೊಟ್ಟಿದ್ದಾರೆ ನನಗೆ ಸ್ವಲ್ಪ English ನ ಕೊರತೆ ಇದೆ. ಆದ್ದರಿಂದ ದಯವಿಟ್ಟು ಕನ್ನಡಕ್ಕೆ ಇದನ್ನು ತರ್ಜುಮೆ ಮಾಡಿ ಕಳುಹಿಸಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ನಿಜ ಹೇಳಬೇಕೆಂದರೆ ತಮ್ಮ ಕ್ಷೇತ್ರದಿಂದ ನನ್ನ ಕ್ಷೇತ್ರದವರೆಗೆ ಅಂಗನವಾಡಿಗಳಿಗೆ ಇರುವ ವಿನ್ಯಾಸವನ್ನು ನೋಡಿ. Slaughter house ತರಹ ಇದ್ದು, ಇಲ್ಲಿಯೇ ಕೆಳಗೆ ಇದೆ ಹೊಗಿ ನೋಡಿ. ಅಲ್ಲಿ ಒಂದು ಅಂಗನವಾಡಿ ಹೇಗಿದೆ ಎಂದರೆ ದನ ಕುಯ್ಯುವ ಮನೆಗೂ ಅಂಗನವಾಡಿಗೂ ಯಾವುದೇ ವ್ಯತ್ಯಾಸವಿಲ್ಲ. 6ಲಕ್ಷ 4ಲಕ್ಷ ರೂ.ಗಳನ್ನು ಕೊಟ್ಟರೆ ಸಾಕಾಗುವುದಿಲ್ಲ ಅವರೇನೂ ಅನಾಥ ಮಕ್ಕಳಲ್ಲ. ದಯವಿಟ್ಟು 12ರಿಂದ 15ಲಕ್ಷ ರೂಪಾಯಿಗಳಲ್ಲಿ ದುರಸ್ತಿ ಮಾಡಿ. ಆಟೋಟಗಳನ್ನು ಆಡಿ, ಉಪಕರಣಗಳನ್ನು ಇಟ್ಟು ಚೆನ್ನಾಗಿ ಆಟ ಆಡುವುದಕ್ಕೆ ವ್ಯವಸ್ಥೆ ಮಾಡಿ Baldwin Convent ನಲ್ಲಿರುವ ಮಕ್ಕಳು air condition ನಲ್ಲಿ ಓದುತ್ತಾರೆ. ಗ್ರಾಮೀಣ ಪ್ರದೇಶದ ಮಕ್ಕಳು ಏನೂ ಅನಾಥ ಮಕ್ಕಳಲ್ಲ. ದಯವಿಟ್ಟು ಬದಲಾವಣೆ ಮಾಡಬೇಕು

ಶ್ರೀಮತಿ ಉಮಾಶ್ರೀ: ಇದಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ RDPR ನಿಂದ ಆದೇಶ ಆಗಿದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ

ಮತ್ತು RDPR ಎರಡೂ ಸೇರಿ ಈಗ 11ಲಕ್ಷದ 95ಸಾವಿರ ರೂ ಗಳಿಗೆ ಹೆಚ್ಚು ಮಾಡಿದ್ದೇವೆ ಎರಡೂ ಕೂಡಿ ಕೆಲಸ ಮಾಡುತ್ತಿವೆ

ಅಧ್ಯಕ್ಷರು: ಇದು ಅನಾವಶ್ಯಕ ಬೇಡ, ಅವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ ಸಾಕು.

ಡಾ: ಸಿ.ಎನ್. ಆಶ್ವತ್ಥನಾರಾಯಣ: ಕೊಟ್ಟಿರುವ ಹಣವನ್ನು ಖರ್ಚು ಮಾಡಿಲ್ಲ ಮಂತ್ರಿಗಳು ಏನು ಮಾಡುತ್ತಿದ್ದಾರೆ? ಅದನ್ನು ನೋಡುವಂಥ ಕೆಲಸ ಮಾಡುತ್ತಿದ್ದಾರೆಯೇ ಅಥವಾ ಮಲಗಿದ್ದಾರೆಯೇ?

(ಗೊಂದಲ)

ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಅವರು ಮಾತನಾಡುವ ರೀತಿ ಸರಿಯಿಲ್ಲ. ಸಚಿವರಾರೂ ಮಲಗುವುದಿಲ್ಲ. ಅವರ ಕೆಲಸ ಅಲ್ಲ ಅದು ಸಂಬಂಧಪಟ್ಟ ಇಲಾಖೆಯವರು ಮಾಡುತ್ತಾರೆ.

(ಗೊಂದಲ)

ಅಧ್ಯಕ್ಷರು. ಏಕೆ ಹಳೆಯದನ್ನೆಲ್ಲ ಪ್ರಸ್ತಾಪಿಸುತ್ತೀರಿ? It is over, Please resume to your seats

ಮನೆ ಮತ್ತು ನಿವೇಶನಗಳ ಹಂಚಿಕೆ

518; ಶ್ರೀ ರಾಜಣ್ಣ ಎಂ

ಅ) ಕಳೆದ 2 ವರ್ಷಗಳಿಂದ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ವಸತಿ ಯೋಜನೆ ಅಡಿಯಲ್ಲಿ ಎಷ್ಟು ಮನೆ ಮತ್ತು ನಿವೇಶನ ಹಂಚಿಕೆ ಮಾಡಲಾಗಿದೆ.

ಆ) ಪ್ರಸ್ತುತ ಬಸವಶ್ರೀ ಯೋಜನೆಯಲ್ಲಿ ಮಂಜೂರಾಗಿರುವ ಮನೆಗಳ ಸಂಖ್ಯೆ ಎಷ್ಟು; ಈ ವೈಕಿ ಎಷ್ಟು ಮನೆಗಳಿಗೆ ಯಾವ ಯಾವ ಹಂತದಲ್ಲಿ ಹಣ ಬಿಡುಗಡೆ ಮಾಡಲಾಗಿದೆ: ಹಣ ಬಿಡುಗಡೆ ಮಾಡಲು ಬಾಕಿ ಇರುವ ಮನೆಗಳ ಸಂಖ್ಯೆ ಎಷ್ಟು?